ಮಹಿಳೆಯರ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಳ ಬಗ್ಗೆ.

೫೬೦ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(೧) ಕರ್ನಾಟಕ ಸರ್ಕಾರವು ಮಹಿಳೆಯರ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಹೆಸರುಗಳು ಮತ್ತು ಯೋಜನೆಗಳ ವಿವರಗಳು ?

(೨) ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಆಗಿರುವ ವೆಚ್ಚವೆಷ್ಟು ?

(೩) ಇವುಗಳಲ್ಲಿ ಕೇಂದ್ರ ಪರಿಷ್ಕೃತ ಯೋಜನೆಗಳೆಷ್ಟು ಅವುಗಳ ವಿವರಗಳು ?

(೪) ಕೇಂದ್ರ ಸರ್ಕಾರವು ಧನ ಸಹಾಯದ ರೂಪದಲ್ಲಿ ಯೋಜನೆಗಳಿಗಾಗಿ ಒದಗಿಸಿರುವ ಹಣ ವೆಷ್ಟು ?

ಶ್ರೀ ಜಿ. ಬಸವಣ್ಣಪ್ಪ. (ಸಮಾಜ ಕಲ್ಯಾಣ ಮಂತ್ರಿಗಳು).—

(೧) ಅನುಬಂಧ-೧ರಲ್ಲಿ ವಿವರಿಸಲಾಗಿದೆ.

(೨) ಅನುಬಂಧ-೨ರಲ್ಲಿ ವಿವರಗಳನ್ನು ನೀಡಲಾಗಿದೆ.

(೩) ಅನುಬಂಧ-೩ರಲ್ಲಿ ವಿವರಿಸಲಾಗಿದೆ.

(೪) ೧೯೮೫-೮೬ನೇ ಸಾಲಿನಲ್ಲಿ ೬೩೭.೫೯ ಲಕ್ಷ ರೂ.ಗಳು ೧೯೮೬-೮೭ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ ೩೦೧.೧೭ ಲಕ್ಷ ರೂ.ಗಳನ್ನು ಧನ ಸಹಾಯ ರೂಪದಲ್ಲಿ ಪಡೆಯಲಾಗಿದೆ.

ಅನುಬಂಧ-I

ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳು

I ಸಮಾಜ ಕಲ್ಯಾಣ ನಿರ್ದೇಶನಾಲಯ.-

ಅಂತರರಾಷ್ಟ್ರೀಯ ಮಹಿಳಾ ವರ್ಷದ ಪ್ರಯುಕ್ತ ೧೯೭೫ ರಲ್ಲಿ ಪ್ರತ್ಯೇಕ ಇಲಾಖೆಯು ಉದಯವಾಯಿತು. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಇಲಾಖೆಯು ಪರಿವೀಕ್ಷಣಾ ಮತ್ತು ಅನುಪಾಲನಾ ಸೇವೆಗಳು ಮತ್ತು ಪೌಷ್ಟಿಕ ಆಹಾರ ಯೋಜನೆಗಳು ಈ ಇಲಾಖೆಗೆ ವರ್ಗಾಯಿಸಲ್ಪಟ್ಟು ಕಾರ್ಯಗತಗೊಳಿಸಲಾಗುತ್ತಿದೆ. ಈ ಇಲಾಖೆಯು ನಿರ್ದೇಶಕರಿಗೆ ಯೋಜನೆಗಳನ್ನು ಕಾರ್ಯಗತಗೊಳಿಸಲು ಈ ಕೆಳಗಿನ ಅಧಿಕಾರಿಗಳು ಸಹಾಯಕರಾಗಿರುತ್ತಾರೆ.

೧ ಜಂಟಿ ನಿರ್ದೇಶಕರು (ಸಮಗ್ರ ಬಾಲವಿಕಾಸ ಯೋಜನೆ)

೨ ಜಂಟಿ ನಿರ್ದೇಶಕರು(ಯೋಜನೆ, ಸಂಯೋಜನೆ ಮತ್ತು ಮೌಲ್ಯಮಾಪನ)

೩ ಜಂಟಿ ನಿರ್ದೇಶಕರು (ಆಡಳಿತ)

೪ ಉಪ ನಿರ್ದೇಶಕರು (ಮಹಿಳಾ ಕಲ್ಯಾಣ)

೫ ಉಪ ನಿರ್ದೇಶಕರು (ಸುಧಾರಣೆ)

೬ ಉಪ ನಿರ್ದೇಶಕರು (ವಿಶೇಷ ಪೌಷ್ಟಿಕ ಆಹಾರ ಯೋಜನೆ)

೭ ಉಪ ನಿರ್ದೇಶಕರು (ಬೀದರ್ ಸಮಗ್ರ ಗ್ರಾಮೀಣ ಯೋಜನೆ)

೮ ಉಪ ನಿರ್ದೇಶಕರು (ತನಿಖಾ ವಿಭಾಗ)

೯ ಸಹಾಯಕ ನಿರ್ದೇಶಕರು (ಮಹಿಳಾ ಕಲ್ಯಾಣ)

೧೦ ಸಹಾಯಕ ನಿರ್ದೇಶಕರು (ಆಹಾರ)

೧೧ ಸಹಾಯಕ ನಿರ್ದೇಶಕರು (ಬೀದರ್ ಸಮಗ್ರ ಗ್ರಾಮೀಣ ಯೋಜನೆ)

೧೨ ಸಹಾಯಕ ನಿರ್ದೇಶಕರು (ಪಂಕ್ಕಳ ಕಲ್ಯಾಣ)

೧೩ ಸಹಾಯಕ ನಿರ್ದೇಶಕರು (ಸುಧಾರಣೆ)

೧೪ ಸಹಾಯಕ ನಿರ್ದೇಶಕರು (ಅಂಗವಿಕಲ ವಿಭಾಗ)

೧೫ ಸಹಾಯಕ ನಿರ್ದೇಶಕರು (ಸಮಗ್ರ ಬಾಲವಿಕಾಸ ಯೋಜನೆ)

೧೬ ವಾರ್ತಾ ಮತ್ತು ಪ್ರಚಾರಾಧಿಕಾರಿ

೧೭ ಲೆಕ್ಕಾಧಿಕಾರಿ

೧೮ ಕಾನೂನು ಅಧಿಕಾರಿ

೧೯ ನಿರೂಪಣಾಧಿಕಾರಿ

೨೦ ಇಲಾಖೆಯ ಜಿಲ್ಲಾಧಿಕಾರಿಗಳು

II ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮಂ.—

ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮವು ರಾಜ್ಯಾದ್ಯಂತ ಜಾರಿಯಲ್ಲಿದೆ. ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ಜಿಲ್ಲೆಯಲ್ಲಿ ಒಬ್ಬ ಜಿಲ್ಲಾ ಪರಿವೀಕ್ಷಣಾಧಿಕಾರಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನ್ಯಾಯಾಲಯಗಳು ಅಪರಾಧಿಗಳನ್ನು ಕಾರಾಗೃಹವಾಸವಿಧಿಸುವ ಬದಲು ಪರಿವೀಕ್ಷಣಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಪುನರಾಜ್ಜೀವನಗೊಳಿಸಲು ಬಿಡುಗಡೆ ಮಾಡಿ ಸತ್ಪ್ರಜೆಗಳಾಗಲು ಬಂಧ ಮುಕ್ತರನ್ನಾಗಿ ಮಾಡಲು ಕಾರ್ಯನಿರ್ವಹಿಸುತ್ತವೆ.

III ಸಿಬ್ಬಂದಿ ತರಬೇತಿ.—

ಇಲಾಖೆಯು ಕಾರ್ಯಗತಗೊಳಿಸುವ ಯೋಜನೆಗಳ ಬಗೆಗೆ ಅಧಿಕಾರಿಗಳಿಗೆ ಹಾಗೂ ನೌಕರರಿಗೆ ತರಬೇತಿ ನೀಡಲಾಗುತ್ತದೆ. ಈ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ತರಬೇತಿ ನೀಡಲಾಗುತ್ತದೆ.

IV ಸಾಮಾಜಿಕ ಸೇವಾ ಭವನ.—

ಈ ಸಂಸ್ಥೆಯು ವೃದ್ಧರಿಗೆ ಮತ್ತು ದುರ್ಬಲರಾದ ಅಂಗವಿಕಲರಿಗೆ ಚಿಕಿತ್ಸೆ ವಸತಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಒದಗಿಸುತ್ತದೆ. ಈ ಸಂಸ್ಥೆಯು ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತದೆ.

V ಮುಖ್ಯ ಸೇವಿಕೆಯರು ಮತ್ತು ಗ್ರಾಮ ಸೇವಿಕೆಯರು.—

ಇವರ ಸೇವೆಗಳನ್ನು ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉಪಯೋಗಿಸಿಕೊಳ್ಳಲಾಗುತ್ತದೆ. ಇವರು ಮಹಿಳಾ ಮಂಡಳಿಗಳನ್ನು ಮತ್ತು ಮಹಿಳಾ ಮಂಡಳ ಒಕ್ಕೂಟಗಳನ್ನು ಸ್ಥಾಪಿಸಲು ಸಹಾಯಕರಾಗಿರುತ್ತಾರೆ.

VI ಅಂಗವಿಕಲರಿಗೆ ವಿದ್ಯಾರ್ಥಿ ವೇತನಗಳು (ಕೇಂದ್ರ ಪುರಸ್ಕೃತ ಯೋಜನೆ).—

ಈ ಕೇಂದ್ರ ಪುರಸ್ಕೃತ ಯೋಜನೆಯನ್ವಯ ೯ನೇ ತರಗತಿಯಿಂದ ಮೇಲ್ಪಟ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ.

ವಿದ್ಯಾರ್ಥಿ ವೇತನಗಳನ್ನು ಈ ರೀತಿಯಲ್ಲಿ ಕೊಡಲಾಗುತ್ತದೆ.

	ತಿಂಗಳ ವೇತನ	ವಸತಿ ಗೃಹಗಳಲ್ಲಿ ಇರುವವರಿಗೆ (ತಿಂಗಳಿಗೆ)	ಕಾರ್ಮಿಕರಿಗೆ ಓದುಗರ ಭತ್ಯ (ತಿಂಗಳಿಗೆ
೯,೧೦ನೇ ತರಗತಿ, ಪಿ. ಯು. ಸಿ., ಮೊದಲನೆಯ ಬಿ. ಎ., ಬಿ. ಕಾಂ., ಬಿ. ಎಸ್. ಸಿ.,	೮೫	೧೪೦	೫೦
೨ ಮತ್ತು ೩ನೇ ಬಿ. ಎ., ಬಿ. ಎಸ್ಸಿ, ಮತ್ತು ಬಿ. ಕಾಂ.	೧೨೫	೧೮೦	೭೫
ಬಿ. ಇ., ಬಿ. ಟೆಕ್, ಎಂ.ಬಿ.ಬಿ.ಎಸ್. ಎಲ್. ಎಲ್. ಬಿ. ,	೧೭೦	೨೪೦	೧೦೦
ಬಿ. ಇ ಡಿ, ಡಿಪ್ಲೋಮಾ ಇನ್ ಪ್ರೊಸೆಕ್ಷನರ್ ಮತ್ತು ಇಂಜಿನಿಯರಿಂಗ್, ಇನ್‌ಪ್ಲಾಂಟ್ ಟ್ರೈನಿಂಗ್	೧೭೦	೨೪೦	೧೦೦
ಎಂ. ಎ., ಎಂ. ಎಸ್ಸಿ, ಎಂ. ಕಾಂ., ಎನ್. ಎಲ್. ಎಂ., ಎಇಡಿ.,	೧೭೦	೨೪೦	೧೦೦

VII ಅಂಗವಿಕಲರ ಸರ್ಕಾರಿ ಶಾಲೆಗಳು.—

ಇಲಾಖೆಯು ಕಿವುಡ ಮತ್ತು ಕುರುಡ ಮಕ್ಕಳಿಗಾಗಿ ಎಂಟು ನಿವಾಸಿತ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳಲ್ಲಿ ಒಂದೇ ತರಗತಿಯವರೆಗೆ ವಿದ್ಯಾಭ್ಯಾಸ ಮತ್ತು ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ. ದಾವಣಗೆರೆ, ಮೈಸೂರು ಮತ್ತು ಗುಲ್ಬರ್ಗ ಕುರುಡರ ಶಾಲೆಗಳಲ್ಲಿ ಮತ್ತು ಮೈಸೂರಿನ ಕಿವುಡರ ಶಾಲೆಯಲ್ಲಿ ಎಸ್. ಎಸ್. ಎಲ್. ಸಿ., ವರೆಗೆ ಶಿಕ್ಷಣವನ್ನು ಕೊಡಲಾಗುತ್ತಿದೆ.

VIII ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಸಾಧನ ಸಲಕರಣೆಗಳಿಗೆ ಧನಸಹಾಯ.—

ರಾಜ್ಯ ಸರ್ಕಾರದ ಯೋಜನೆಯನ್ವಯ ೪ನೇ ತರಗತಿಯವರೆಗೆ ಓದುವ ಅಂಗವಿಕಲ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೫ ರೂ.ಗಳಂತೆ ಮತ್ತು ೫ನೇ ತರಗತಿಯಿಂದ ೮ನೇ ತರಗತಿಯವರೆಗೆ ಓದುವ ವಿದ್ಯಾರ್ಥಿಗಳಿಗೆ ತಿಂಗಳಿಗೆ ೩೫ ರೂ.ಗಳಂತೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಇದಲ್ಲದೆ, ತಿಂಗಳಿಗೆ ೧೫ ರೂ.ಗಳಂತೆ ಪ್ರಯಾಣ ಭತ್ಯವನ್ನು ಕೊಡಲಾಗುತ್ತದೆ.

ಅಂಗವಿಕಲರು ತಮಗೆ ಬೇಕಾದ ಸಾಧನ ಸಲಕರಣೆಗಳನ್ನು ಕೊಂಡುಕೊಳ್ಳಲು ವಾರ್ಷಿಕ ವರಮಾನ ೬,೦೦೦ ರೂ.ಗಳಿಗಿಂತ ಕಡಿಮೆಯಿದ್ದಲ್ಲಿ ಶೇಕಡ ೧೦೦ ರಷ್ಟು ೬,೦೦೦ ರೂ.ಗಳಿಂದ ೧೨,೦೦೦ ರೂ.ಗಳವರೆಗೆ ವಾರ್ಷಿಕ ವರಮಾನವಿರುವವರಿಗೆ ಶೇಕಡ ೭೫ ರಷ್ಟು ಧನ ಸಹಾಯ ನೀಡಲಾಗುತ್ತದೆ.

IX ಅಂಗವಿಕಲ ಮತ್ತು ಮನೋವಿಕಲರ ಪುನರುಜ್ಜೀವನಕ್ಕಾಗಿ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮ.—

ಕೇಂದ್ರ ಸರ್ಕಾರದ ಯೋಜನೆಯಂತೆ ಅಂಗವಿಕಲ ಮತ್ತು ಮನೋವಿಕಲ ಶ್ರೇಯೋಭಿವೃದ್ಧಿಗೆ ಶಿಕ್ಷಣ ಮತ್ತು ತರಬೇತಿ ನೀಡುವ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ಹಣಕಾಸು ನೆರವು ನೀಡಲಾಗುತ್ತದೆ. ಈ ಕೆಳಗಿನ ವಿಷಯಗಳಿಗೆ ಧನ ಸಹಾಯ ನೀಡಲಾಗುತ್ತದೆ. (ಶೇಕಡ ೯೦ ರಷ್ಟು.)

೧ ಸಿಬ್ಬಂದಿಯ ವಸತಿ ಗೃಹಗಳಿಗೆ ಹೊರತುಪಡಿಸಿ ಕಟ್ಟಡ ನಿರ್ಮಾಣ (ಪರಿಮಿತಿ ೩೫ ಲ ರೂ.ಗಳು ಮಾತ್ರ)

೨ ಅಂಗವಿಕಲ ಸಂಸ್ಥೆಗಳಿಗೆ ಪೀಠೋಪಕರಣಗಳು.

೩ ಶಿಕ್ಷಣ ಮಂತ್ತು ತರಬೇತಿಗೆ ಸಂಬಂಧಿಸಿದ ಸಲಕರಣೆಗಳು.

೪ ಸಿಬ್ಬಂದಿಯ ಸಂಬಳ.

೫ ಪುಸ್ತಕಗಳು.

೬ ಸಮ್ಮೇಳನ, ಸಭೆ, ಪ್ರದರ್ಶನಗಳಿಗೆ

೭ ಸಂಶೋಧನೆ ಮತ್ತು ಪರಿಶೀಲನೆ

೮ ಪುಸ್ತಕ ಪ್ರಕಟಣೆ, ಮುಂತಾದವುಗಳಿಗೆ

ರಾಜ್ಯ ಸರ್ಕಾರದ ಯೋಜನೆಯಂತೆ ಅಂಗವಿಕಲ ಮತ್ತು ಮನೋವಿಕಲರ ಕಲ್ಯಾಣಕ್ಕಾಗಿ ಶಿಕ್ಷಣ ಮಂತ್ತು ತರಬೇತಿ ನೀಡುವ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ನೀಡಲಾಗುತ್ತಿದೆ. ಸಂಸ್ಥೆಗಳು ವೆಚ್ಚ ಮಾಡುವ ವೆಚ್ಚಗಳಿಗೆ ಯೋಜನೆಯಂತೆ ಆವರ್ತಕ ಮಂತ್ತು ಅನಾವರ್ತಕ ವೆಚ್ಚದ ಶೇಕಡ ೫೦ರಷ್ಟು ಮತ್ತು ಸಿಬ್ಬಂದಿ ವೇತನದ ೧೦೦ ರಷ್ಟನ್ನು ಧನ ಸಹಾಯವಾಗಿ ಕೊಡಲಾಗುತ್ತದೆ.

X ಅಂಗವಿಕಲರ ಮತ್ತು ಅಸಮರ್ಥ ಬಾಲಕರಿಗೆ ಮಾಸಿಕ ವೇತನ.–

ಈ ಯೋಜನೆಯಂತೆ ಅಂಗವಿಕಲರ ಮನೋವಿಕಲರ ಮತ್ತು ಅಸಮರ್ಥ ವ್ಯಕ್ತಿಗಳಿಗೆ ತಿಂಗಳಿಗೆ ೫೦ ರೂ.ಗಳಂತೆ ಧನ ಸಹಾಯ ನೀಡಲ ಗುತ್ತಿದೆ. ಈ ಯೋಜನೆಯ ಪ್ರಕಾರ ವಾರ್ಷಿಕ ಆದಾಯ ೩,೬೦೦ ಗಳಿಗಿಂತ ಕಡಿಮೆ ಇರುವ ವ್ಯಕ್ತಿಗಳು ಅರ್ಹರಾಗಿರುತ್ತಾರೆ

XI ಅಂಗವಿಕಲ ಉದ್ಯೋಗಿಗಳಿಗೆ ಮತ್ತು ತರಬೇತಿದಾರರಿಗೆ ವಸತಿ ನಿಲಯಗಳು.–

ಅಂಗವಿಕಲ ಉದ್ಯೋಗಿಗಳಿಗೆ ಮತ್ತು ತರಬೇತಿದಾರರಿಗೆ ಬೆಂಗಳೂರಿನಲ್ಲಿ **ಎರಡು ವಸತಿ** ನಿಲಯಗಳನ್ನು ನಡೆಸಲಾಗುತ್ತದೆ. ಇವುಗಳಲ್ಲಿ ಒಂದು ಮಹಿಳೆಯರಿಗೆ ಮತ್ತೊಂದು ಪುರುಷರಿಗೆ ನಡೆಸಲಾಗುತ್ತಿದೆ. ಊಟದ ವೆಚ್ಚವನ್ನು ತಾವೇ ಭರಿಸಬೇಕಾಗುತ್ತದೆ. ಇದರ ಆದಾಯವು ತಿಂಗಳಿಗೆ ೭೫೦ ರೂ.ಗಳಿಗಿಂತ ಕಡಿಮೆಯಿರಬೇಕು.

XII ಅಂಗವಿಕಲ ಉದ್ಯಮಿಗಳಿಗೆ ಮರುಧನ ಯೋಜನೆ.–

ಅಂಗವಿಕಲರ ಸ್ವಯಂ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಸಣ್ಣ ಪ್ರಮಾಣದ ಮತ್ತು ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಲ್ಲಿ ಅಂಗವಿಕಲರ ಪ್ರತಿಭೆಗೆ ಅನುಸಾರವಾಗಿ ಗರಿಷ್ಠ ಅವರ ಪುನರಾಜೀವನಕ್ಕಾಗಿ ೨೫,೦೦೦ ರೂ.ಗಳವರೆಗೆ ಸಾಲವನ್ನು ಕರ್ನಾಟಕ ರಾಜ್ಯ; ಹಣಕಾಸು ನಿಗಮದ ಮೂಲಕ ಕಂತಿನಲ್ಲಿ ಕೊಡಲಾಗುತ್ತಿದೆ. ಇದರಲ್ಲಿ ಶೇಕಡ ೨೫ ರಷ್ಟನ್ನು ರಿಯಾಯಿತಿಯಾಗಿ ಪರಿಗಣಿಸಲಾಗುವುದು.

XIII ಬ್ರೈಲ್ ಮುದ್ರಣಾಲಯ –

ಮೈಸೂರಿನಲ್ಲಿ ಯೂನಿಸೆಫ್ ಸಹಾಯಾರ್ಥದಿಂದ ಅಂಧರಿಗೆ ಓದುವ ವಿಷಯಗಳನ್ನು ಸರಬರಾಜು ಮಾಡುವ ಉದ್ದೇಶದಿಂದ ಬ್ರೈಲ್ ಮುದ್ರಣಾಲಯವನ್ನು ಪ್ರಾರಂಭಿಸಲಾಗಿದೆ.

XIV ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು.–

ಈ ಯೋಜನೆಯಂತೆ ಕೇಂದ್ರ ಸರ್ಕಾರವು ಶೇಕಡಾವಾರಿಯೊಳಗೆ ಇಲಾಖೆಯವರು ಒಪ್ಪಿರುವುದಕ್ಕೆ ನಕ್ಷೆ ಮತ್ತು ಅಂದಾಜು ಪಟ್ಟಿಗಳ ಆಧಾರದ ಮೇಲೆ ಶೇಕಡ ೭೫ ರಷ್ಟು ಧನ ಸಹಾಯವನ್ನು ಕಟ್ಟಡದ ನಿರ್ಮಾಣಕ್ಕೆ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ಕೊಡುತ್ತದೆ. ಇಂತಹ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಶೇಕಡ ೧೨½ ರಷ್ಟನ್ನು ಕಟ್ಟಡ ನಿರ್ಮಾಣಕ್ಕಾಗಿ ನೀಡಲಾಗುತ್ತಿದೆ. ವಸತಿ ನಿಲಯಗಳನ್ನು ನಿರ್ಮಿಸಲು ಸಂಬಂಧಿಸಿದ ನಗರ ಅಥವಾ ಪಟ್ಟಣಗಳಲ್ಲಿ ಕನಿಷ್ಠ ೨೫ ಉದ್ಯೋಗಸ್ಥ ಮಹಿಳೆಯರಿಗೆ ವಸತಿಯ ಅಗತ್ಯವಿರಬೇಕಾಗುತ್ತದೆ.

ಇದಲ್ಲದೆ, ಸ್ವಯಂ ಸೇವಾ ಸಂಸ್ಥೆಗಳು ವಸತಿ ನಿಲಯಗಳನ್ನು ಪ್ರಾರಂಭಿಸಲು ಅಡ್‌ಹಾಕ್ ಅನುದಾನವಾಗಿ ೧೦,೦೦೦ ರೂ.ಗಳನ್ನು ನೀಡಲಾಗುತ್ತಿದೆ. ಇದನ್ನು ವಸತಿ ನಿಲಯದ ಪೀಠೋಪಕರಣಗಳನ್ನು ಅಡಿಗೆ ಸಾಮಾನುಗಳನ್ನು ಕೊಳ್ಳಲು ಉಪಯೋಗಿಸಿಕೊಳ್ಳಬಹುದಾಗಿದೆ.

XV ಸಾರ್ವಜನಿಕ ಸಹಕಾರ ಮತ್ತು ಕುಟುಂಬ ಜೀವನ ಶಿಕ್ಷಣ.–

ಈ ಯೋಜನೆಯಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮೆಚ್ಚಿದ ಶೇಕಡ ೫೦ ರಷ್ಟನ್ನು ಅನುದಾನವಾಗಿ ನೀಡಲಾಗುವುದು.

XVI ಮಹಿಳಾ ಸಮಾಜಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಗೃಹ ಕೈಗಾರಿಕೆಗಳಲ್ಲಿ ತರಬೇತಿ.–

ನೊಂದಾಯಿತ ಮಹಿಳಾ ಸಮಾಜಗಳು ಮಹಿಳೆಯರಿಗೆ ಗೃಹ ಕೈಗಾರಿಕೆಗಳಲ್ಲಿ ತರಬೇತಿ ನೀಡಲು ಮುಂದೆ ಬಂದರೆ ಅಂತಹ ಮಹಿಳಾ ಸಮಾಜಗಳಿಗೆ ಅನುದಾನವನ್ನು ನೀಡಲಾಗುತ್ತಿದೆ.

XVII ಗೃಹ ಕಲ್ಯಾಣ ಯೋಜನೆ.–

ಸಮಾಜದ ದುರ್ಬಲ ವರ್ಗದ ಮಹಿಳೆಯರನ್ನು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಲು ಉಪಯುಕ್ತವಾಗಿದೆ. ಈ ಯೋಜನೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಮಹಿಳೆಯರಿಗೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ನೀಡುವ ಸಾಲಕ್ಕೆ ಸರ್ಕಾರವು ಶೇಕಡ ೨೫ ರಷ್ಟನ್ನು ವಿಯಾಯಿತಿಯನ್ನು ನೀಡಲಾಗುತ್ತಿದೆ.

XVIII ಸಂಕಷ್ಟದಲ್ಲಿರುವ ಮಹಿಳೆಯರಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಹಣಕಾಸಿನ ನೆರವು.–

ಸಂಕಷ್ಟದಲ್ಲಿರುವ ಮಹಿಳೆಯರ ಜೀವನ ಉತ್ತಮಪಡಿಸಲು ಸ್ವಯಂ ಸೇವಾ ಸಂಸ್ಥೆಗಳು ತರಬೇತಿ ನೀಡಲು ಮುಂದೆ ಬಂದರೆ, ಅಂತಹ ಸಂಸ್ಥೆಗಳಿಗೆ ಧನ ಸಹಾಯ ನೀಡಲಾಗುವುದು. ಈ ಯೋಜನೆಯಂತೆ ಮಹಿಳೆಯರಿಗೆ ತರಬೇತಿ ಅವಧಿಯಲ್ಲಿ ವಸತಿ ಸೌಕರ್ಯ ನೀಡಲು ಅವಕಾಶವಿರುತ್ತದೆ. ತರಬೇತಿಯನ್ನು ೧೮-೫೦ ವರ್ಷದೊಳಗಿನ ಪ್ರತಿ ತಂಡದಲ್ಲಿ ೪೦ ಮಹಿಳೆಯರಿಗೆ ೬ ತಿಂಗಳಲ್ಲಿ ನೀಡಲಾಗುವುದು.

XIX ಸ್ವಯಂ ಉದ್ಯೋಗಕ್ಕೆ ಮಹಿಳೆಯರಿಗೆ ವೃತ್ತಿಪರ ತರಬೇತಿ ನೀಡಲು ಮತ್ತು ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ನೆರವು.–

ಮಹಿಳೆಯರಿಗಾಗಿ ತರಬೇತಿ ಮತ್ತು ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಸರ್ಕಾರ, ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಗರಿಷ್ಠ ೧.೦೦ ಲಕ್ಷ ರೂ.ಗಳವರೆಗೆ ಹಣಕಾಸಿನ ನೆರವು ನೀಡಲಾಗುವುದು.

XX ವಿಧವಾ–ವಿವಾಹ.–

ವಿಧವೆಯವರ ಪುನರುಜ್ಜೀವನಕ್ಕಾಗಿ ವಿವಾಹವಾಗಲು ೩,೦೦೦ ರೂ.ಗಳನ್ನು ಸಹಾಯಾರ್ಥವಾಗಿ ನೀಡಲಾಗುತ್ತದೆ. ಈ ಯೋಜನೆಗೆ ಅರ್ಹರಾಗಬೇಕಾದರೆ ಅವರ ಆದಾಯ ತಿಂಗಳಿಗೆ ೨೦೦ ರೂ.ಗಳಿಗಿಂತ ಕಡಿಮೆ ಇರಬೇಕಾಗುತ್ತದೆ ಮತ್ತು ಕುಟುಂಬ ಆದಾಯ ೭೦೦ ರೂ.ಗಳಿಗಿಂತ ಕಡಿಮೆಯಿರಬೇಕು.

XXI ದೇವದಾಸಿಯರ ಮಂದುವೆ.–

ದೇವದಾಸಿಯರ ಮಂದುವೆಯಾಗ ಬಯಸಿದಲ್ಲಿ ಅಂತಹವರಿಗೆ ೩,೦೦೦ ರೂ.ಗಳನ್ನು ಸಹಾಯ ಮಾಡಲಾಗುವುದು,

XXII ತರಬೇತಿಗಾಗಿ ಬಡ ಮಹಿಳೆಯರಿಗೆ ಅನುದಾನ.–

ಈ ಯೋಜನೆಯಲ್ಲಿ ಮಹಿಳೆಯರು ವೃತ್ತಿಪರ ತರಬೇತಿ ಪಡೆಯುತ್ತಿದ್ದರೆ, ಅಂತಹ ಮಹಿಳೆಯರಿಗೆ ಫೀಜು ಮತ್ತು ಬೇಕಾದ ಸಾಮಗ್ರಿಗಳ ಬೆಲೆಯನ್ನು ಗರಿಷ್ಠ ೫೦೦ ರೂ.ಗಳವರೆಗೆ ಹಣಕಾಸು ನೆರವು ನೀಡಲಾಗುವುದು.

XXIII ಜಮೀನಿಲ್ಲದ ಕೃಷಿ ಕಾರ್ಮಿಕ ಮಹಿಳೆಯರಿಗೆ ಹೆರಿಗೆ ಭತ್ಯ.–

ಜಮೀನಿಲ್ಲದ ಕೃಷಿ ಕಾರ್ಮಿಕ ಮಹಿಳೆಯರು ಹಳ್ಳಿಗಾಡಿನಲ್ಲಿ ಹೆರಿಗೆ ಕಾಲದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವುಗಳಲ್ಲಿ ವೈದ್ಯಕೀಯ ಶುಶ್ರೂಷೆ ಮತ್ತು ನ್ಯೂನ ಪೋಷಣೆಗೆ ಒಳಗಾಗಿರುತ್ತಾರೆ. ಆದ್ದರಿಂದ, ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ಸರ್ಕಾರವು ಹೆರಿಗೆಯ ಮುನ್ನ ಮೂರು ತಿಂಗಳ ಭತ್ಯವೆಂದು ಪರಿಗಣಿಸಿ ೩೦೦ರೂ.ಗಳನ್ನು ಒಟ್ಟಿಗೆ ಕೊಡ ಲಾಗುತ್ತದೆ. ಈ ನೆರವು ಕೇವಲ ಎರಡು ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ.

XXIV ಮಕ್ಕಳ ದಿನಾಚರಣೆ :–

ನವೆಂಬರ್ ೧೪ ರಂದು ಮಕ್ಕಳ ದಿನಾಚರಣೆಯನ್ನು ಆಚರಿಸಿ ಮಕ್ಕಳಿಗೆ ಕಾರ್ಯಕ್ರಮದ ಬಗ್ಗೆ ಅರಿವು ಮಾಡಿಕೊಡಲು ಸ್ವಯಂ ಸೇವಾ ಸಂಸ್ಥೆಗಳಿಗೆ ನೇರವು ನೀಡಲಾಗುವುದು.

XXV ತಾಳಿಯ ಭಾಗ್ಯ :–

ಬಡ ಯುವ–ಯುವತಿಯರು ಆಡಂಬರದ ಮದುವೆಗಳಿಗೆ ಮಾರು ಹೋಗದೆ ಸಾಮೂಹಿಕ ವಿವಾಹಗಳನ್ನು ಮಾಡಿಕೊಳ್ಳಲು ತಾಳಿಯ ಮತ್ತು ವಸ್ತ್ರಗಳ ರೂಪದಲ್ಲಿ ಒಂದು ಮದುವೆಗೆ ೩೫೦ ರೂ.ಗಳನ್ನು ನೀಡಲಾಗುತ್ತದೆ.

XXVI ಶಾಲಾ ಪೂರ್ವ ಮಕ್ಕಳ ಪೌಷ್ಟಿಕ ಆಹಾರ ಯೋಜನೆ :–

ಈ ಯೋಜನೆಯನ್ನು ೧೫,೦೦೦ ಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯುಳ್ಳ ನಗರಪಟ್ಟಣಗಳಲ್ಲಿ ಕಾರ್ಯ ಗತಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ೬ ವರ್ಷದೊಳಗಿನ ಮಕ್ಕಳು ಗರ್ಭಿಣಿ ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರವನ್ನು ಕೊಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಬ್ರೆಡ್, ಹಾಲು ಮತ್ತು ಶಕ್ತಿದಾಯಕ ಆಹಾರದ ರೂಪದಲ್ಲಿ ಕೊಡಲಾಗುತ್ತಿದೆ.

XXVII ಕುಟುಂಬ ಮತ್ತು ಮಕ್ಕಳ ಕಲ್ಯಾಣ ಕರ್ನಾಟಕ ರಾಜ್ಯ ಸಲಹಾ ಮಂಡಳಿ

ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಸಲಹಾ ಮಂಡಳಿಗೆ ಅನುದಾನವನ್ನು ನೀಡುತ್ತಿದೆ.

XXVIII ನಿರ್ಗತಿಕ : : ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣಾ ಕಾರ್ಯಕ್ರಮ :–

ಇದು ಕೇಂದ್ರ ಪುರಸ್ಕೃತ ಯೋಜನೆ. ಈ ಯೋಜನೆಯಲ್ಲಿ ನೊಂದಾಯಿಸಿದ ಸ್ವಯಂ ಸೇವಾ ಸಂಸ್ಥೆಗಳ ಅನಾಥಾಲಯಗಳನ್ನು ಪ್ರಾರಂಭಿಸಿ ಮಕ್ಕಳಿಗೆ ಶಿಕ್ಷಣ ಮತ್ತು ವೃತ್ತಿಪರ ತರಬೇತಿಗಳನ್ನು ಕೊಡಿಸಿ, ಸತ್ಪ್ರಜೆಗಳನ್ನಾಗಿ ಮಾಡಲು ಅನುದಾನವನ್ನು ಕೊಡಲಾಗುತ್ತಿದೆ. ಈ ಯೋಜನೆಯಲ್ಲಿ ೫–೧೪ ವರ್ಷಗಳ ಮಕ್ಕಳನ್ನು ಸೇರಿಸಿಕೊಂಡು, ೧೮ ವರ್ಷಗಳವರೆಗೆ ಪ್ರಯೋಜನ ಪಡೆಯಲು ಅರ್ಹರಾಗಿರು ತ್ತಾರೆ. ಸಂಸ್ಥೆಗಳ ಶೇಕಡ ೯೦ ರಷ್ಟು ವೆಚ್ಚವನ್ನು ಸರ್ಕಾರವು ಪಡೆಸಿಕೊಳ್ಳುತ್ತದೆ. ಈ ಯೋಜನೆಯಂತೆ ಕಟ್ಟಡದ ಬಾಡಿಗೆ ಹೊರತು ಪಡಿಸಿ, ಪ್ರತೀ ಮಗುವಿಗೆ ತಿಂಗಳಿಗೆ ೧೫೦–೦೦ ಗಳನ್ನು ವೆಚ್ಚ ಮಾಡಬಹುದಾಗಿದೆ. ಇದರಲ್ಲಿ ಶೇಕಡ ೧೦ ಮಾತ್ರ ಸಂಸ್ಥೆಗಳು ಭರಿಸಿಕೊಳ್ಳಲಾಗತ್ತದೆ.

XXIX ಶಿಶು ಕಲ್ಯಾಣ ಮತ್ತು ವಿನೋದಗಳ ಅಭಿವೃದ್ಧಿ (ಬಾಲಭವನ):–

ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರಲು ಮತ್ತು ಅವರು ಮನರಂಜನಾ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುವಂತೆ, ಮಾಡಲು ಬಾಲಭವನವು ಅನೇಕ ಚಟುವಟಿಕೆಗಳನ್ನು ನಡೆಸುತ್ತಿದೆ. ಕರಕುಶಲ, ಕೆಲಸ, ವರ್ಣಚಿತ್ರ ರಚನೆ, ಎಲೆಕ್ಟ್ರಾನಿಕ್ಸ್, ಜೇಡಿ ಮಣ್ಣಿನಲ್ಲಿ ವಿನ್ಯಾಸ ರಚನೆ, ನೃತ್ಯ ಹಾಗೂ ನಾಟಕ, ಮುಂತಾದ ಸೃಜನಾತ್ಮಕ ಕಲೆಗಳಲ್ಲಿ ಭಾಗವಹಿಸಲು ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತದೆ.

XXX ಸಮಗ್ರ ಬಾಲವಿಕಾಸ ಸೇವಾ ಯೋಜನೆ :–

ಸಮಗ್ರ ಬಾಲವಿಕಾಸ ಯೋಜನೆಯು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ, ಈ ಯೋಜನೆಯಡಿ ೦–೬ ವಯೋ ವರ್ಗದ ಮಕ್ಕಳಿಗೆ ಮತ್ತು ಗರ್ಭಿಣಿ ಹಾಗೂ ಹಾಲುಣಿಸುವ ತಾಯಂದಿರಿಗೆ ರೋಗ ನಿರೋಧಕ ಚುಚ್ಚು ಪದ್ಧತಿ, ಆರೋಗ್ಯ ತಪಾಸಣೆ, ಪೋಷಕಾಂಶಗಳ ಹಾಗೂ ಅನೌಪಚಾರಿಕ ಶಿಕ್ಷಣ ಸೇವೆಗಳನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಪ್ರತೀ ೧,೦೦೦ ಜನಸಂಖ್ಯೆಗೆ ಒಂದು ಅಂಗನವಾಡಿ ಕೇಂದ್ರವನ್ನು ಸ್ಥಾಪಿಸಿ, ಆ ಕ್ಷೇತ್ರದ ಎಲ್ಲಾ ಯೋಗ್ಯ ಫಲಾನುಭವಿಗಳಿಗೆ ಸೇವೆಗಳನ್ನು ವಿಸ್ತರಿಸಲಾಗಿದೆ. ಈ ಯೋಜನೆಯ ಸೇವೆಗಳನ್ನು ಫಲಾನುಭವಿಗಳಿಗೆ ಅಂಗನವಾಡಿ ಕೇಂದ್ರಗಳ ಮುಖಾಂತರ ತಲುಪಿಸಲಾಗುತ್ತದೆ. ಈ ಅಂಗನವಾಡಿ ಕೇಂದ್ರವು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನಿರ್ವಹಣೆಯಲ್ಲಿರುತ್ತದೆ. ಈ ಯೋಜನೆಗಳನ್ನು ಬಾಲವಿಕಾಸ ಯೋಜನಾಧಿಕಾರಿಗಳು, ಸಹಾಯಕ ಬಾಲವಿಕಾಸ ಯೋಜನಾಧಿಕಾರಿಗಳು ಮತ್ತು ಮೇಲ್ವಿಚಾರಕರ ಸಹಾಯದಿಂದ ಜಾರಿಗೊಳಿಸಲಾಗುತ್ತದೆ. ಇದುವರೆಗೂ ನಮ್ಮ ರಾಜ್ಯದಲ್ಲಿ ೬೪ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

ಉತ್ತಮವಾದ ರೀತಿಯಲ್ಲಿ ಬಾಲವಿಕಾಸ ಯೋಜನೆಗಳನ್ನು ಕಾರ್ಯಗತಗೊಳಿಸಲು ಐದು ಅಥವಾ ಹೆಚ್ಚಿನ ಯೋಜನೆಗಳಿರುವ ಪ್ರತಿ ಜಿಲ್ಲೆಯಲ್ಲಿ ಬಾಲವಿಕಾಸ ಯೋಜನೆಯ ಪರಿಶೀಲನ ಘಟಕವನ್ನು ಸ್ಥಾಪಿಸಲಾಗಿದೆ. ಇಂತಹ ಘಟಕಗಳು ಬೀದರ್, ಗುಲ್ಬರ್ಗ, ಬಿಜಾಪುರ, ಧಾರವಾಡ, ಶಿವಮೊಗ್ಗ, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಈ ಯೋಜನೆಯು ಮೇರೆಗೆ ರಾಜ್ಯ ಸರ್ಕಾರವು ೩೦ ತಾಲ್ಲೂಕುಗಳಲ್ಲಿ ಬಾಲವಿಕಾಸ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ಆದರೆ, ಈ ಕ್ಷೇತ್ರಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿರುವಂತೆ, ಎಲ್ಲಾ ಯೋಗ್ಯ ಫಲಾನುಭವಿಗಳಿಗೂ ಸೇವೆಗಳನ್ನು ವಿಸ್ತರಿಸದೆ, ಸುಮಾರು ೧೦೦ ಅಂಗನವಾಡಿ ಕೇಂದ್ರಗಳಲ್ಲಿ ೧೨,೦೦೦ ಫಲಾನುಭವಿಗಳಿಗೆ ಸೇವೆಗಳನ್ನು ವಿಸ್ತರಿಸಲಾಗುತ್ತಿದೆ. ಈ ಯೋಜನೆಯು ಮೇಲ್ವಿಚಾರಣೆಯನ್ನು ಬಾಲವಿಕಾಸ ಯೋಜನಾಧಿಕಾರಿ ಹಾಗೂ ಮೇಲ್ವಿಚಾರಕರು ನೋಡಿಕೊಳ್ಳುವರು.

ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಪಾಲಿನಿಂದ ಕಾರ್ಯಗತಗೊಳಿಸುತ್ತಿರುವ ಯೋಜನೆಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಿ, ಫಲಾನುಭವಿಗಳಿಗೆ ಸೇವೆಗಳನ್ನು ವಿಸ್ತರಿಸಲಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ವೆಚ್ಚ ಮಾಡಲಾಗಿದೆ.

XXXI ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕಾರ್ಯಕ್ರಮ (ಕೇಂದ್ರ ಪುರಸ್ಕೃತ ಯೋಜನೆ) :–

ಅಂಗನವಾಡಿ ಕಾರ್ಯಕರ್ತೆಯರು ಬಾಲವಿಕಾಸ ಯೋಜನೆಗಳಲ್ಲಿ ಯೋಜನೆಯ ಸೇವೆಗಳನ್ನು ಕಾರ್ಯಗತಗೊಳಿಸಲು ನೇಮಕವಾದ ಅಂಗನವಾಡಿ ಕಾರ್ಯಕರ್ತೆಯರಿಗೆ ೩ ತಿಂಗಳ ತರಬೇತಿ ನೀಡಲಾಗುತ್ತಿದೆ.

XXXII ಅಂಗನವಾಡಿ ಕಟ್ಟಡಗಳ ನಿರ್ಮಾಣ :–

ಅಂಗನವಾಡಿ ಕೇಂದ್ರಗಳಲ್ಲಿ ಬಾಲವಿಕಾಸ ಯೋಜನೆಯ ಸೇವೆಗಳನ್ನು ನೀಡಲು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಯೋಚಿಸಲಾಗಿದೆ.

XXXIII ಬಾಲ ಸೇವಾ ಸಂಸ್ಥೆ ಮಂತ್ತು ಶಿಶು ಮಾರ್ಗದರ್ಶನ :-

ನಗರದ ಕೊಳಚೆ ಪ್ರದೇಶದ ಮಕ್ಕಳಿಗೆ ಕ್ರೀಡಾ ಕೇಂದ್ರಗಳ ಮೂಲಕ ಮನರಂಜನೆಯನ್ನು ಒದಗಿಸಿ ಬಾಲಾಪರಾಧಗಳನ್ನು ತಡೆಗಟ್ಟಲು ಈ ಕಾರ್ಯಕ್ರಮದ ಮೂಲಕ ಪ್ರಯತ್ನಿಸಲಾಗುತ್ತಿದೆ. ಕೊಳಚೆ ಪ್ರದೇಶಗಳ ಮಕ್ಕಳಿಗೆ ಮತ್ತು ಶಾಲೆಗಳಲ್ಲಿ ಸಮಸ್ಯೆಗಳಿಂದ ಕೂಡಿರುವ ಮಕ್ಕಳಿಗೆ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡುತ್ತಾರೆ.

XXXIV ಉದ್ಯೋಗಸ್ಥ ಮಹಿಳೆಯರ ಶಿಶುಪಾಲನಾ ಕೇಂದ್ರಗಳು :-

ಈ ಯೋಜನೆಯ ಪ್ರಕಾರ ೩ ವರ್ಷಕ್ಕಿಂತಲೂ ಕಡಿಮೆಯಿರುವ ಬಡ ಮಹಿಳೆಯರ ಮಕ್ಕಳಿಗೆ ಆಶ್ರಯ ಮತ್ತು ಉತ್ತಮ ವಾತವರಣವನ್ನು ಕಲ್ಪಿಸಿಕೊಟ್ಟು ಆರೋಗ್ಯಕರ ಬೆಳವಣಿಗೆಗೆ ಸಹಾಯಕವಾಗುವುದರ ಜೊತೆಗೆ ನಶ್ವರತೆಯನ್ನು ಇಳಿಮುಖಗೊಳಿಸುವುದೇ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ಯೋಜನೆಯ ಪ್ರಕಾರ ವೆಚ್ಚದ ಶೇಕಡ ೯೦ ರಷ್ಟನ್ನು ಸಹಾಯ ನೀಡಲಾಗುವುದು.

XXXV ಪ್ರದೇಶ ಅಭಿವೃದ್ಧಿಯಲ್ಲಿ ಸಾಮಾಜಿಕ ಪರಿಕರಗಳು :-

ಸಮರ್ಥವಾದ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಆರೋಗ್ಯ, ಪೌಷ್ಟಿಕ ಆಹಾರ ಹಾಗೂ ಶಿಕ್ಷಣ ಮತ್ತು ಸಮುದಾಯ ಅಭಿವೃದ್ಧಿ ಹಾಗೂ ಸಂಪನ್ಮೂಲಗಳ ಉತ್ಪಾದನೆ ಇವುಗಳಲ್ಲಿ ವ್ಯಾಪಕವಾಗಿ ಈ ಯೋಜನೆಯು ಪಾಪ್ತಿಗೊಳ್ಳುತ್ತದೆ. ಈ ಯೋಜನೆಯು ಗ್ರಾಮೀಣ ಕುಟುಂಬಗಳ ಆದಾಯೋತ್ಪನ್ನ ಚಟುವಟಿಕೆಗಳ ಸಮಾಜ ಸೇವೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಸಾಮೂಹಿಕ ವಿಷಯಗಳಲ್ಲಿ ಭಾಗವಹಿಸುವುದು ಮುಂತಾದವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ.

XXXVI ಬೀದರ್ ಜಿಲ್ಲೆಯ ಸಮಗ್ರ ಗ್ರಾಮೀಣ, ಅಭಿವೃದ್ಧಿ ಯೋಜನೆ :-

ಅಭಿವೃದ್ಧಿ ಕಾರ್ಯಗಳಿಗಾಗಿ ಮಹಿಳೆಯರನ್ನು ಸನ್ನದ್ಧರಾಗಿಸುವುದಕ್ಕಾಗಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ದೊರಕುವ ಸಾಧನ ಸಾಮಗ್ರಿಗಳನ್ನು ಆರ್ಥಿಕ ಪ್ರಯೋಜನಗಳೊಂದಿಗೆ ಸಮ್ಮಿಲನಗೊಳಿಸುವುದಕ್ಕಾಗಿ ಸ್ವೀಡ್ಜರ್‌ಲ್ಯಾಂಡ್ ಸರ್ಕಾರದ ನೆರವಿನಿಂದ ಈ ಯೋಜನೆಯನ್ನು ಸ್ಥಾಪಿಸಲಾಗಿದೆ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಂದ ಗುರುತಿಸಲಾದ ಎಲ್ಲಾ ಕುಟುಂಬಗಳ ೬ ವರ್ಷ ದೊಳಗಿನ ಮಕ್ಕಳು ಗರ್ಭಿಣಿಯರು ಮತ್ತು ಬಾಣಂತಿಯರಂತಹ ದುರ್ಬಲ ವರ್ಗದವರೆಲ್ಲರಿಗೂ ಸೌಲಭ್ಯ ಒದಗಿಸುವುದು. ಈ ಯೋಜನೆಯ ಮುಖ್ಯ ಗುರಿಯಾಗಿದೆ. ಈ ಯೋಜನೆಯು ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಇಲಾಖೆಯ ಯೋಜನೆಗಳ ಜೊತೆಗೆ ಇತರೆ ಇಲಾಖೆಗಳಾದ ಸಾರ್ವಜನಿಕ ಆರೋಗ್ಯ, ವಯಸ್ಕರ ಶಿಕ್ಷಣ, ರೇಷ್ಮೆ ವ್ಯವಸಾಯ, ತೋಟಗಾರಿಕೆ ಇಲಾಖೆಗಳೊಂದಿಗೆ ಬೆರತು ಗ್ರಾಮೀಣ ಜನರಿಗೆ ಸೌಲಭ್ಯಗಳನ್ನು ಒದಗಿಸಲಾಗುವುದು.

XXXVII ವೃದ್ಧರ, ರೋಗಗ್ರಸ್ಥರ ಮಂತ್ತು ಅಸಮರ್ಥರ ರಕ್ಷಣೆಗೆ ಸ್ವಯಂ ಸೇವಾ ಸಂಸ್ಥೆಗಳು :-

ಈ ಯೋಜನೆಯಂತೆ ವೃದ್ಧರ, ರೋಗಗ್ರಸ್ಥರ ಮತ್ತು ಅಸಮರ್ಥರ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ನಿರ್ವಹಿಸುವ ವೆಚ್ಚದ ಶೇಕಡ ೫೦ ರಷ್ಟನ್ನು ನೆರವು ನೀಡಲಾಗುತ್ತಿದೆ.

XXXVIII ಪುರಂಪರಿಗಾಗಿ ರಾಜ್ಯ ನಿಲಯಂಗಳು ಮಂತ್ತು ಜಿಲ್ಲಾ ಆಶ್ರಯಂಗಳು (ಅನುಪಾಲನಾ ಗೃಹಗಳು)

ಈ ಯೋಜನೆಯಂತೆ ರಾಜ್ಯದಲ್ಲಿ ತಲಾ ಒಂದರಂತೆ ಬೆಂಗಳೂರು, ಬೆಳಗಾಂ ಹುಬ್ಬಳ್ಳಿ ಮಂತಹ್ತ ಮೈಸೂರಿನಲ್ಲಿ ನಾಲ್ಕು ಸಂಸ್ಥೆಗಳಿವೆ. ಈ ಸಂಸ್ಥೆಗಳಲ್ಲಿ ಹೊಲಿಗೆ, ಮರಗೆಲಸ ಮುಂತಾದವುಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಈ ಸಂಸ್ಥೆಗಳಲ್ಲಿನ ಆರ್ಹ ನಿವಾಸಿಗಳಿಗೆ ಪ್ರೌಢಶಾಲೆ, ಕಾಲೇಜು, ಐ.ಟಿ.ಐ. ಮುಂಂತಾದವುಗಳಲ್ಲಿ ಶಿಕ್ಷಣ ಪಡೆಯಲು ಏರ್ಪಡಿಸಲಾಗುವುದು. ಇವರಿಗೆ ಸೂಕ್ತ ಉದ್ಯೋಗ ಕಲ್ಪಿಸಿಕೊಟ್ಟು ಪುನರ್ವಸತಿ ಕಲ್ಪಿಸಲು ಪ್ರಯತ್ನಿಸಲಾಗುವುದು.

XXXIX ಸಂಸ್ಥೆಗಳ ನಿವಾಸಿಗಳ ವಿವಾಹಕ್ಕೆ ಪ್ರೋತ್ಸಾಹ ನೀಡಲು ಹಣಕಾಸು ನೆರವು :-

ಈ ಕಾರ್ಯಕ್ರಮದ ಮೇರೆಗೆ ಇಲಾಖೆಯ ಸಂಸ್ಥೆಗಳಲ್ಲಿನ ಮಹಿಳಾ ನಿವಾಸಿಗಳನ್ನು ಮದುವೆಯಾದಲ್ಲಿ ದಂಪತಿಗಳಿಗೆ ೩,೦೦೦ ರೂ.ಗಳ ಹಣಕಾಸು ನೆರವು ನೀಡಲಾಗುವುದು.

XXXX ಮಹಿಳೆಯರಿಗೆ ರಾಜ್ಯ ನಿಲಯಂಗಳು ಮತ್ತು ಸ್ವೀಕಾರ ಕೇಂದ್ರಗಳು :-

೧. ಸ್ವೀಕಾರ ಕೇಂದ್ರಗಳು :- ಈ ಸಂಸ್ಥೆಗಳು ಆಶ್ರಯದ ಅಗತ್ಯವಿರುವ ಅಥವಾ ತಾವಾಗಿಯೇ ಆಶ್ರಯಂ ಕೋರಿ ಬಂದ ಮಹಿಳೆಯರಿಗೆ ಅಲ್ಪಕಾಲಿಕ ಮತ್ತು ತಾತ್ಕಾಲಿಕ ಆಶ್ರಯ ನೀಡಿ ಅವರ ಪುನರ್ವತಿಗೆ ಏರ್ಪಡಿಸುವ ಅಥವಾ ರಾಜ್ಯ ನಿಲಯಗಳಿಗೆ ಕಳುಹಿಸಂವ ತನಕ ಆಶ್ರಯ ನೀಡಲಾಗುತ್ತಿದೆ.

೨. ರಾಜ್ಯ ನಿಲಯಂಗಳು :- ಈ ಸಂಸ್ಥೆಗಳು ಸಂಕಷ್ಟದಲ್ಲಿರಂವ ಕನ್ಯಾ ಮಾತೆಯರ, ವಿಧವೆಯರ ಮಂತ್ತು ಅನೈತಿಕತೆಗೆ ಒಳಗಾದ ಮಹಿಳೆಯರಿಗೆ ದೀರ್ಘಕಾಲ ಆಶ್ರಯ ನೀಡಲಾಗುತ್ತಿದೆ. ಅವರಿಗೆ ಶಿಕ್ಷಣ ಮತ್ತು ತರಬೇತಿಗಳನ್ನು ನೀಡಿ ಪುನರ್ವಸತಿಗೆ ಏರ್ಪಾಡು ಮಾಡಲಾಗುತ್ತಿದೆ. ಈ ಸಂಸ್ಥೆಗಳಲ್ಲಿ ಮಹಿಳೆಯರಿಗೆ ನೇಯ್ಗೆ, ಹೊಲಿಗೆ, ಕಸೂತಿ, ಕೈಮಗ್ಗ, ಸಿದ್ಧಪಡಿಸಿದ ಉಡುಪುಗಳ ತಯಾರಿಕೆ ಮುಂಂತಾದವುಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಪ್ರಮಾಣಿತ ಶಾಲೆಗಳು ಮತ್ತು ಪ್ರತಿಪ್ರೇಕ್ಷಣ ಗೃಹಗಳು :-

೧. ಪ್ರತಿ ಪ್ರೇಕ್ಷಣಾ ಗೃಹಗಳು :- ಈ ಇಲಾಖೆಯು ಕರ್ನಾಟಕ ಮಕ್ಕಳ ಅಧಿನಿಯಮ ೧೯೬೪ರ ಪ್ರಕಾರ ೨೨ ಪ್ರತಿಪ್ರೇಕ್ಷಣಾ ಗೃಹಗಳನ್ನು ರಾಜ್ಯದಲ್ಲಿ ನಡೆಸಲಾಗುತ್ತಿದೆ. ನಿರ್ಲಕ್ಷ್ಯಕ್ಕೊಳಗಾದ ಮೋಸಕ್ಕೊಳಗಾದ ಮತ್ತು ನಿಯಂತ್ರಿಸಲಾಗದಂಥ ಮಕ್ಕಳು ಮತ್ತು ಬಾಲಾಪರಾಧಿಗಳನ್ನು ಪರಿವೀಕ್ಷಣೆಗಾಗಿ ಹಾಗೂ ಅವರು ಬೆಳೆದ ವಾತಾವರಣ, ನಡವಳಿಕೆ ಮತ್ತು ಪೂರ್ವೋತ್ತರಗಳನ್ನು ತಿಳಿಯುವ ಸಲುವಾಗಿ ವಿವರವಾದ ತನಿಖೆಯನ್ನು ನಡೆಸಲು ಈ ಸಂಸ್ಥೆಗಳಲ್ಲಿ ಸೇರಿಸಿಕೊಳ್ಳಲಾಗುವುದು. ಪರಿವೀಕ್ಷಣಾಧಿಕಾರಿಗಳು ನ್ಯಾಯಾಲಕ್ಕೆ ಸಲ್ಲಿಸಂವ ವರದಿಗಳ ಆಧಾರದ ಮೇಲೆ ನ್ಯಾಯಾಲಯಂವು ಮಕ್ಕಳ ಪುನರ್ವಸತಿಯಂ ಬಗೆಗೆ ತೀರ್ಮಾನ ತೆಗೆದುಕೊಳ್ಳಲಾಗುವುದಂ.

೨. ಪ್ರಮಾಣಿತ ಶಾಲೆಗಳು :- ಪ್ರತಿಪ್ರೇಕ್ಷಣಾ ಗೃಹಗಳಿಂದ ಮಕ್ಕಳ ತಂದೆತಾಯಿಗಳ ಅಥವಾ ಪೋಷಕರಿಗೆ ಕಳುಹಿಸದಿದ್ದಲ್ಲಿ, ಅಂತಹ ಮಕ್ಕಳನ್ನು ಪ್ರಮಾಣಿತ ಶಾಲೆಗಳಲ್ಲಿ ಪುನರ್ವಸತಿಗಾಗಿ ಸೇರಿಸಿಕೊಳ್ಳಲಾಗುವುದು. ಅವರಿಗೆ ಊಟ, ವಸತಿ, ಶಿಕ್ಷಣ ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ. ಇವರಿಗೆ ಎಲ್ಲಾ ವಿಧವಾದ ಸೌಲಭ್ಯಗಳನ್ನು ಅವರು ಸ್ವಂತ ಉದ್ಯೋಗಿಗಳಾಗಿ ಉತ್ತಮ ಪ್ರಜೆಗಳಾಗಲಂ ಪ್ರಯತ್ನಿಸಲಾಗುವುದು.

XXXXI ರಕ್ಷಕ ಸ್ತ್ರೀಯರ ಮಂತ್ತು ಬಾಲಕಿಯರ ವಸತಿ ನಿಲಯಂಗಳು :-

ಬಡವರ ಹಾಗೂ ನೈತಿಕತೆಯಂ ಅಪಾಯದಲ್ಲಿರುವ ಮಹಿಳೆಯರಿಗೆ ರಕ್ಷಣೆ ನೀಡಲು ವಸತಿ ನಿಲಯಂಗಳನ್ನು ನಡೆಸುವ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ಮೆಚ್ಚಿದ ಶೇಕಡ ೫೦ ರಷ್ಟು ಹಣಕಾಸಿನ ನೆರವು ನೀಡಲಾಗುವುದು.

ಅನುಬಂಧ–II

ಸಮಾಜ ಕಲ್ಯಾಣ ಇಲಾಖೆ

ಚುಕ್ಕೆ ಗುರುತಿನ ಪ್ರಶ್ನೆ 560

೧೯೮೫–೮೬ ಮತ್ತು ೧೯೮೬–೮೭ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ಕೈಗೊಂಡಿದ ವಿವಿಧ ಯೋಜನೆಗಳ ಆರ್ಥಿಕ ಪ್ರಗತಿ

ಕ್ರಮ ಸಂಖ್ಯೆ	ಯೋಜನೆಗಳು	೧೯೮೫–೮೬			೧೯೮೬–೮೭		
		ಯೋಜನೆ	ಯೋಜನೇತರ	ಒಟ್ಟು	ಯೋಜನೆ	ಯೋಜನೇತರ	ಒಟ್ಟು
೧	೨	೩	೪	೫	೬	೭	೮
೧	ಸಮಾಜ ಕಲ್ಯಾಣ ನಿರ್ದೇಶನಾಲಯ	೯.೭೨	೬೬.೫೯	೭೬.೩೧	೮.೭೬	೩೦.೭೯	೩೯.೪೫
೨	ಸಿಬ್ಬಂದಿ ತರಬೇತಿ ಹಾಗೂ ಸಂಶೋಧನೆ	—	೦.೦೮	೦.೦೮	—	—	—
೩	ಸಮಾಜ ಸೇವಾ ಘಟಕ	—	೨.೮೯	೨.೮೯	—	೧.೫೨	೧.೫೨
೪	ಮುಖ್ಯ ಸೇವಕಿಯರು ಮತ್ತು ಗ್ರಾಮಸೇವಕಿಯರು	—	೪೭.೮೪	೪೭.೮೪	೫.೯೭	೫೯.೫೭	೬೫.೫೪
೫	ಅಂಗವಿಕಲರಿಗಾಗಿ ಸರ್ಕಾರೇತರ ಸಂಸ್ಥೆಗಳು	—	೦.೯೯	೦.೯೯	—	೦.೯೫	೦.೯೫
೬	ಕಿವುಡರ ಮತ್ತು ಕುರುಡು ಶಾಲೆಗಳ ಅಭಿವೃದ್ಧಿ	೦.೦೨	೮.೧೧	೮.೧೩	—	—	—
೭	ಅಂಗವಿಕಲ ಉದ್ದಿಮೆದಾರರಿಗೆ ಮೂಲಧನ ಯೋಜನೆ	೧.೦೦	—	೧.೦೦	೧.೦೦	—	೧.೦೦
೮	ಅಂಗವಿಕಲರಿಗಾಗಿ ಸರ್ಕಾರಿ ಶಾಲೆಗಳು	೦.೦೨	೨೭.೩೮	೨೭.೪೦	—	೧೪.೫೬	೧೪.೫೬
೯	ಅಂಗವಿಕಲರಿಗೆ ವಿದ್ಯಾರ್ಥಿ ವೇತನ ಹಾಗೂ ಧನಸಹಾಯ	೦.೦೧	೪೩.೫೭	೪೩.೫೮	—	೫.೮೮	೫.೮೮
೧೦	ಅಂಗವಿಕಲ ಮತ್ತು ಮನೋವಿಕಲ ಪುನರಂಜ್ಜೀವನ ಕ್ಕಾಗಿ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮ	೫.೫೨	೧೯.೧೬	೨೭.೬೮	—	೩.೪೨	೩.೪೨

೧೧	ಅಂಗವಿಕಲ ಹಾಗೂ ಅಸಮರ್ಥ ಬಡವರಿಗೆ ಮಾಸಾಶನ	೦.೧೫	೯೬.೧೭೫	೯೬.೮೬	—	೫೨೬.೨೦	೫೨೬.೨೦
೧೨	ಕಿವುಡು ಮಕ್ಕಳಿಗಾಗಿ ಶಾಲೆ	—	೧.೮೨	೧.೮೨	—	೦.೯೬	೦.೯೬
೧೩	ಉದ್ಯೋಗಸ್ಥ ಅಸಮರ್ಥರಿಗೆ ವಸತಿ ಗೃಹಗಳು	೧.೨೦	—	೧.೨೦	೧.೧೫	—	೧.೧೫
೧೪	ಬ್ರೈಲ್ ಮುದ್ರಣಾಲಯ	೧.೬೭	೦.೧೫	೧.೮೦	೦.೮೭	—	೦.೮೭
೧೫	ಉದ್ಯೋಗಸ್ಥ ಮಹಿಳೆಯರ ವಸತಿಗೃಹಗಳು	—	೫.೦೬	೫.೦೬	—	೦.೫೯	೦.೫೯
೧೬	ಸಾರ್ವಜನಿಕ ಸಹಕಾರ ಮತ್ತು ಕಂಟುಂಬ ಜೀವನ ಶಿಕ್ಷಣ	—	೦.೫೦	೦.೫೦	—	—	—
೧೭	ಮಹಿಳಾ ಅಭ್ಯರ್ಥಿಗಳಿಗೆ ಹಾಗೂ ಸ್ವಯಂಸೇವಾ ಸಂಸ್ಥೆಗಳಿಗೆ ಗೃಹ ಕೈಗಾರಿಕೆಗಳಲ್ಲಿ ತರಬೇತಿ	೧.೧೦	೨.೦೬	೯.೧೬	—	೦.೧೨	೦.೧೨
೧೮	ಸ್ವಯಂ ಉದ್ಯೋಗಕ್ಕೆ ಮಹಿಳೆಯರಿಗೆ ವೃತ್ತಿಪರ ತರಬೇತಿ ನೀಡಲು ಧನಸಹಾಯ	೦.೦೨	—	೦.೦೨	೦.೫೪	—	೦.೫೪
೧೯	ಮಹಿಳೆಯರ ಆದಾಯೋತ್ಪನ್ನ ಚಟುವಟಿಕೆಗಳಿಗೆ ರಿಯಾಯಿತಿ ನೀಡಲು ಗೃಹಕಲ್ಯಾಣ ಯೋಜನೆ	೧೭.೯೧	೦.೦೩	೫೭.೯೪	೧.೪೬	—	೧.೪೬
೨೦	ಮಹಿಳಾ ಮಂಡಳಿಗಳ ತಾಲ್ಲೂಕು ಮಟ್ಟದ ಒಕ್ಕೂಟಗಳು	೦.೯೩	—	೦.೯೩	೦.೨೧	—	೦.೨೧
೨೧	ತರಬೇತಿಗಾಗಿ ಬಡಮಹಿಳೆಯರಿಗೆ ಸಹಾಯ ಅನುಧಾನ	೦.೨೫	೧.೧೪	೧.೩೯	—	೦.೦೧	೦.೦೧
೨೨	ಜಮೀನುರಹಿತ ಕೃಷಿ ಕಾರ್ಮಿಕ ಮಹಿಳೆಯರಿಗೆ ಹೆರಿಗೆಭತ್ಯ	—	೩೭೬.೦೬	೩೭೬.೦೬	—	೨೧೦.೪೫	೨೧೦.೪೫
೨೩	ತಾಳಿಯ ಭಾಗ್ಯ	೧೧.೮೦	—	೧೧.೮೦	೫.೭೬	—	೫.೭೬
೨೪	ಶಾಲಾಪೂರ್ವ ಮಕ್ಕಳಿಗೆ ಪೌಷ್ಟಿಕ ಆಹಾರ ಯೋಜನೆ	೬೧.೭೨	೭೪೨.೫೬	೮೦೪.೨೮	೨೬೧.೮೩	—	೨೬೧.೮೨
೨೫	ಕಂಟುಂಬ ಮತ್ತು ಮಕ್ಕಳ ಕಲ್ಯಾಣ, ಕರ್ನಾಟಕ ರಾಜ್ಯ ಸಲಹಾ ಮಂಡಳಿ	೦.೮೫	೧.೫೯	೨.೪೪	—	೨.೬೫	೨.೬೫
೨೬	ನಿರ್ಗತಿಕ ಹಾಗೂ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣಾ ಕಾರ್ಯಕ್ರಮ	೨೭.೪೭	೩.೩೦	೩೦.೭೭	೧೨.೨೨	—	೧೨.೨೨

೨೭	ಶಿಶು ಕಲ್ಯಾಣ ಮತ್ತು ವಿನೋದಗಳ ಅಭಿವೃದ್ಧಿ (ಬಾಲ ಭವನ)	—	೫೧.೬೪	೨೧.೬೪	—	—	—
೨೮	ಕುಟುಂಬ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು	—	೨೩.೩೩	೨೩.೩೩	—	೧೪.೯೭	೧೪.೯೭
೨೯	ಬಾಲ ಸೇವಾ ಸಂಸ್ಥೆ ಮತ್ತು ಶಿಶು ಮಾರ್ಗದರ್ಶನ ಕೇಂದ್ರಗಳು	೦.೧೧	೧೨.೩೯	೧೨.೫೦	—	೧೧.೧೯	೧೧.೧೯
೩೦	ಉದ್ಯೋಗಸ್ಥ ಮಹಿಳೆಯರ ಶಿಶುಪಾಲನಾ ಕೇಂದ್ರಗಳು	೨.೪೯	೦.೨೫	೨.೬೯	೧.೩೯	೦.೦೪	೧.೪೩
೩೧	ಪ್ರಾದೇಶಿಕ ಅಭಿವೃದ್ಧಿಗಾಗಿ ಸಾಮಾಜಿಕ ಪರಿಕರ ಯೋಜನೆಗಳು	೧೧.೮೬	—	೧೧.೮೬	೭.೯೪	—	೭.೯೪
೩೨	ಬೀದರ್ ಗ್ರಾಮೀಣ ಅಭಿವೃದ್ಧಿ ಯೋಜನೆ	೭.೦೮	—	೭.೦೮	೧೦.೨೪	—	೧೦.೨೪
೩೩	ಸಮಗ್ರ ಕುಟುಂಬ ಕಲ್ಯಾಣಗಳ ಸೇವೆಗಳ ಯೋಜನೆ	೦.೪೬	೨೧೬.೮೬	೨೬೧.೩೨	—	೧೦೮.೩೧	೧೦೮.೩೧
೩೪	ಮಕ್ಕಳ ದಿನಾಚರಣೆ ಕೇಂದ್ರ	೦.೨೫	—	೦.೨೫	೦.೨೩	—	೦.೨೩
೩೫	ಅಂಗನವಾಡಿ ಕೇಂದ್ರ ಕಟ್ಟಡಗಳ ನಿರ್ಮಾಣ	೦.೪೭	—	೦.೪೭	೧.೨೬	—	೧.೨೬
೩೬	ವೃದ್ಧರ, ಅಬಲರ ಮತ್ತು ರೋಗಗ್ರಸ್ತರ ಪಾಲನೆಗಾಗಿ ಸ್ವಯಂಸೇವಾ ಸಂಸ್ಥೆಗಳು	—	೧.೧೨	೧.೧೨	—	—	—
೩೭	ಗಂಡಸರಿಗೆ ರಾಜ್ಯ ನಿಲಯಗಳು ಮತ್ತು ಜಿಲ್ಲಾ ಆಶ್ರಯಗಳು	—	೬.೪೮	೬.೪೮	—	೩.೪೬	೩.೪೬
೩೮	ಸಂಸ್ಥೆಗಳಲ್ಲಿರುವ ನಿವಾಸಿಗಳಿಗೆ ವಿವಾಹ ಯೋಜನೆ	೦.೨೦	೦.೦೧	೦.೨೧	—	—	—
೩೯	ಕಟ್ಟಡಗಳು	—	—	—	೧.೨೩	—	೧.೨೩
೪೦	ರಾಜ್ಯ ನಿಲಯಗಳು ಮತ್ತು ಸ್ವೀಕಾರ ಕೇಂದ್ರಗಳು	೧.೦೮	೫೨.೨೪	೫೩.೩೨	೨.೬೧	೨೬.೧೭	೨೮.೭೮
೪೧	ಲೋಯರ್ ಮತ್ತು ಹೈಯರ್ ಸೆಕೆಂಡರಿ ವರ್ಗಗಳಿಗೆ ಸಂಕ್ಷಿಪ್ತ ಸಾಕ್ಷರತಾ ಶಿಕ್ಷಣ	—	೦.೬೧	೦.೬೧	—	೦.೧೮	೦.೧೮
೪೨	ಪ್ರಾಮಾಣಿತ ಶಾಲೆಗಳೂ ಮತ್ತು ಪ್ರತಿಪೇಕ್ಷಣಾ ಗೃಹಗಳು	೧.೪೫	೧೪೭.೪೫	೧೪೮.೯೦	೪.೯೦	೫೬.೮೧	೬೧.೭೧
೪೩	ರಕ್ಷಿತ ಸ್ತ್ರೀಯರ ಮತ್ತು ಬಾಲಕಿಯರ ವಸತಿ ನಿಲಯಗಳು	೦.೪೭	೦.೧೩	೦.೬೦	—	—	—

೧	೨	೩	೪	೫	೬	೭	೮
೪೪	ಸಾಮಾಜಿಕ ಕೆಡಕುಗಳ ನಿರ್ಮೂಲನೆಯ ಒತ್ತಾಯಕ್ಕಾಗಿ ವಿಭಾಗ	—	೩.೨೮	೩.೨೮	—	೧.೪೬	೧.೪೬
೪೫	ಗುಡ್ಡಗಾಡು ಪ್ರದೇಶ ಉಪಯೋಜನೆ	೪.೭೬	—	೪.೭೬	೧.೨೨	—	೧.೨೨
೪೬	ಮಹಿಳಾ ಅಭಿವೃದ್ಧಿ ನಿಗಮ	—	—	—	—	—	—
೪೭	ಸಂಕಷ್ಟದಲ್ಲಿರುವ ಮಹಿಳೆಯರಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಸ್ವಯಂಸೇವಾ ಸಂಸ್ಥೆಗಳಿಗೆ ಹಣಕಾಸಿನ ನೆರವು	೩.೮೧	—	೩.೮೧	೧.೩೦	—	೧.೩೦
೪೮	ಸಮಗ್ರ ಬಾಲ ವಿಕಾಸ ಯೋಜನೆ	೬೦೯.೩೩	—	೬೦೯.೩೮	೨೮೧.೨೪	—	೨೮೧.೨೪
೪೯	ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕೇಂದ್ರ	೩೦.೪೩	—	೩೦.೪೩	೧೬.೦೫	—	೧೬.೦೫
೫೦	ನಿರ್ಗತಿಕ ಹಾಗೂ ಅನಾಥಮಕ್ಕಳ ಶಿಕ್ಷಣಾ ಮತ್ತು ಪೋಷಣಾ ಕಾರ್ಯಕ್ರಮ	೩೫.೫೯	—	೩೫.೫೯	೧೫.೩೫	—	೧೫.೩೫
೫೧	ವೃದ್ಧ ಮಹಿಳೆಯರಿಗಾಗಿ ವಿದ್ಯುಕ್ತವಾದ ಅಕ್ಷರತೆಯ ಯೋಜನೆ	೨.೦೦	—	೨.೦೦	—	—	—
	ಒಟ್ಟು ಮೊತ್ತ	೮೮೩.೦೦	೨೭೯.೬೫	೩೬೮೦.೦೫	೬೪೪.೭೦	೧೦೯೦.೨೫	೧೭೨೪.೯೫

ಬಿ. ವಿ. ಕಲ್ಲಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ಅನುಬಂಧ-III

ಕೇಂದ್ರ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆ

ಕ್ರಮ ಸಂಖ್ಯೆ	ಯೋಜನೆ	೧೯೮೫-೮೬		೧೯೮೬-೮೭	
		ಕೇಂದ್ರ ಸರ್ಕಾರ ದಿಂದ ಪಡೆದ ಹಣ	ವೆಚ್ಚ ಮಾಡಿದ ಹಣ	ಕೇಂದ್ರ ಸರ್ಕಾರ ದಿಂದ ಪಡೆದ ಹಣ	ವೆಚ್ಚ ಮಾಡಿದ ಹಣ
೧	ಪ್ರೌಢ ಮಹಿಳೆಯರಿಗಾಗಿ ವಿದ್ಯುಕ್ತವಾದ ಅಕ್ಷರತೆಯ ಯೋಜನೆ	—	೨.೧೦	—	—
೨	ಅಂಕಪಟ್ಟದಲ್ಲಿರುವ ಮಹಿಳೆಯರಿಗಾಗಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಹಣಕಾಸಿನ ನೆರವು	—	೮.೯೧	—	೧.೩೦
೩	ಸಮಗ್ರ ಬಾಲವಿಕಾಸ ಯೋಜನೆ	೫೯೦.೧೪	೬೦೯.೩೯	೨೪೧.೨೧	೨೪೧.೨೪
೪	ಅಂಗನವಾಡಿ ಕಾರ್ಯಕರ್ತರಿಗಾಗಿ ತರಬೇತಿ ಕಾರ್ಯಕ್ರಮ	೩೧.೫೯	೩೦.೪೩	೧೬.೦೫	೧೬.೦೫
೫	ನಿರ್ಗತಿಕ ಹಾಗೂ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆ ಕಾರ್ಯಕ್ರಮ	೧೬.೦೨	೩೫.೫೬	೩.೯೨	೧೫.೩೫
		೬೩೭.೬೫	೬೮೬.೩೯	೩೦೧.೦೭	೩೧೩.೯೪